**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **1415** |
| ಉತ್ತರಿಸಬೇಕಾದ ದಿನಾಂಕ | : | 16.03.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಸತಿ ಇಲಾಖೆಯಡಿಯಲ್ಲಿ ಯಾವ ಯಾವ ಯೋಜನೆಗಳ ಮೂಲಕ ಎಷ್ಟು ಮನೆಗಳನ್ನು ನಿರ್ಮಿಸಲಾಗುತ್ತಿದೆ; | ದಕ್ಷಿಣ ಕನ್ನಡ ಜಿಲ್ಲೆಗೆ 2013-14 ನೇ ಸಾಲಿನಿಂದ 2020-21 ನೇ ಸಾಲಿನವರೆಗೆ ವಿವಿಧ ವಸತಿ ಯೋಜನೆಯಡಿ ಒಟ್ಟು 43205 ಮನೆಗಳು ಮಂಜೂರಾಗಿದ್ದು, 30551 ಮನೆಗಳು ಪೂರ್ಣಗೊಂಡಿರುತ್ತದೆ. 5579 ಮನೆಗಳು ಪ್ರಗತಿಯಲ್ಲಿದ್ದು, 870 ಮನೆಗಳು ಪ್ರಾರಂಭವಾಗಬೇಕಿರುತ್ತದೆ, ಉಳಿದಂತೆ 6205 ಮನೆಗಳು ನಿಗದಿತ ಅವಧಿಯಲ್ಲಿ ಪ್ರಾರಂಭ ಮಾಡಿಕೊಳ್ಳದೇ ಇರುವುದರಿಂದ ರದ್ದಾಗಿರುತ್ತದೆ. ಯೋಜನಾವಾರು ವಿವರ ಕೆಳಕಂಡಂತಿದೆ. |
| ಆ) | ರಾಜೀವ್ ಗಾಂಧಿ ವಸತಿ ಯೋಜನೆಯ ಅನ್ವಯ ನಿರ್ಮಿಸಲಾಗುತ್ತಿರುವ ಮನೆಗಳ ಸಂಖ್ಯೆ ಎಷ್ಟು; | |

| ಯೋಜನೆ | ಆಯ್ಕೆ | ಪೂರ್ಣ | ಪ್ರಗತಿ | ಪ್ರಾರಂಭವಾಗದ ಮನೆ ಗಳು | ರದ್ದಾದ ಮನೆ ಗಳು |
|---|---|---|---|---|---|
| ಬಸವ ವಸತಿ ಯೋಜನೆ | 26255 | 19331 | 3024 | 0 | 3900 |
| ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ & ನಗರ) | 43 | 34 | 2 | 0 | 7 |
| ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ವಸತಿ ಯೋಜನೆ (ಗ್ರಾಮೀಣ & ನಗರ) | 4140 | 2410 | 835 | 1 | 894 |
| ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) | 8619 | 6983 | 490 | 10 | 1136 |
| ವಾಜಪೇಯಿ ನಗರ ವಸತಿ ಯೋಜನೆ | 1908 | 1469 | 171 | 0 | 268 |
| **ಒಟ್ಟು** | **40965** | **30227** | **4522** | **11** | **6205** |
| ಪಿ.ಎಂ.ಎ.ವೈ (ಯು) AHP-ULB* | 824 | 32 | 600 | 192 | 0 |
| ಪಿ.ಎಂ.ಎ.ವೈ (ಯು) Non-convergence | 1416 | 292 | 457 | 667 | 0 |
| **ಒಟ್ಟು** | **2240** | **324** | **1057** | **859** | **0** |
| **ಒಟ್ಟು** | **43205** | **30551** | **5579** | **870** | **6205** |

* ಮಂಗಳೂರು ನಗರದಲ್ಲಿ ಪಿ.ಎಂ.ಎ.ವೈ (ಯು)-ಎ.ಎಚ್.ಪಿ ಅಡಿ 1530 ಮನೆಗಳನ್ನು ನಿರ್ಮಿಸಲು ಅನುಮೋದನೆ ಪಡೆಯಲಾಗಿದ್ದು, ಟೆಂಡರ್ ಆಹ್ವಾನಿಸಬೇಕಿದೆ. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ 500 ಮನೆಗಳಿಗೆ ಅನುಮೋದನೆ ಪಡೆದಿದ್ದು, ಟೆಂಡರ್ (3ನೆಯ call) ಆಹ್ವಾನಿಸಿದೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಸರ್ಕಾರದ ಆದೇಶ ಸಂಖ್ಯೆ: ವಇ 12 ಹೆಚ್ಎಹೆಚ್ 2020, ದಿನಾಂಕ:19.05.2020 ರನ್ವಯ ವಿವಿಧ ವಸತಿ ಯೋಜನೆಗಳಡಿಯಲ್ಲಿ ಆಯ್ಕೆಯಾಗದ ಮತ್ತು ಆಯ್ಕೆಯಾಗಿ ವಿವಿಧ ಲಾಗಿನ್ ಹಂತದಲ್ಲಿರುವ ಹಾಗೂ ನಿಗದಿತ ಸಮಯದೊಳಗೆ ಪ್ರಾರಂಭ ಮಾಡಿಕೊಳ್ಳದೇ ಇರುವ ಮನೆಗಳನ್ನು ಹಿಂಪಡೆಯಲಾಗಿದೆ. |
| | | ಸರ್ಕಾರದ ಆದೇಶ ಸಂಖ್ಯೆ:ವಇ 11 ಹೆಚ್ ಎಎಂ 2022, ದಿನಾಂಕ:18.02.2022 ರಲ್ಲಿ ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗಿ ವಿವಿಧ ಲಾಗಿನ್ ಹಂತದಲ್ಲಿದ್ದು, ಅನುಮೋದನೆ ನೀಡಲು ಬಾಕಿ ಇದ್ದಂತಹ ಮನೆಗಳನ್ನು ಹಾಗೂ ಸಾಕಷ್ಟು ಕಾಲಾವಕಾಶವನ್ನು ನೀಡಿದ್ದಾಗ್ಯೂ ಕೂಡ ಮನೆ ಪ್ರಾರಂಭ ಮಾಡಿ ಕೊಳ್ಳದ ಮನೆಗಳನ್ನು ಮರು ಆಯ್ಕೆಗೆ ನಿಯಮಾನುಸಾರ ಪರಿಗಣಿಸಲು ಅನುಮತಿ ನೀಡಿ ಆದೇಶಿಸಿದೆ.<br><br>2021-22 ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ವಇ 44 ಹೆಚ್ಎಹೆಚ್ 2021(ಭಾಗ-2), ದಿನಾಂಕ:31.12.2021 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ 9215 ಹೊಸ ಮನೆಗಳ ಗುರಿಯನ್ನು ವಿವಿಧ ಗ್ರಾಮ ಪಂಚಾಯತಿ/ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದ್ದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಯೋಜನೆವಾರು ವಿವರ ಕೆಳಕಂಡಂತಿದೆ.<br><br>**ಪ್ರದೇಶ** / **ಯೋಜನೆ** / **ಗುರಿ**<br>ಗ್ರಾಮೀಣ / ಬಸವ ವಸತಿ ಯೋಜನೆ / 6137<br>ಗ್ರಾಮೀಣ / ಡಾ\|\|ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾಮೀಣ) / 1953<br>ನಗರ / ವಾಜಪೇಯಿ ನಗರ ವಸತಿ ಯೋಜನೆ / 855<br>ನಗರ / ಡಾ\|\|ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ(ನಗರ) / 270<br>**ಒಟ್ಟು** / **9215** |
| ಇ) | 3 ವರ್ಷಗಳಲ್ಲಿ ಮನೆಗಳನ್ನು ನೀಡುವಂತೆ ಕೋರಿ ಬಂದ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ; ಎಷ್ಟು ಮನೆಗಳನ್ನು ವಿತರಿಸಲಾಗಿದೆ; ಎಷ್ಟು ಅರ್ಜಿಗಳು ವಿಲೇವಾರಿಯಾಗಿ ಬಾಕಿ ಇವೆ; | ಗ್ರಾಮೀಣ ಪ್ರದೇಶದಲ್ಲಿ 2018 ರಲ್ಲಿ ವಸತಿ ರಹಿತರ ಹಾಗೂ ನಿವೇಶನ ರಹಿತರ ಸಮೀಕ್ಷೆ ಕೈಗೊಳ್ಳಲಾಗಿದ್ದು, ಸದರಿ ಸಮೀಕ್ಷೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 18917 ವಸತಿ ರಹಿತರು ಕಂಡು ಬಂದಿರುತ್ತಾರೆ. ಸದರಿ ಸಮೀಕ್ಷೆಯ ನಂತರ ಅಂದರೆ 2018-19 ರಿಂದ 2021-22 ರವರೆಗೆ 8112 ಮನೆಗಳನ್ನು ಮಂಜೂರು ಮಾಡಲಾಗಿದೆ. ಇನ್ನುಳಿದಂತೆ 10805 ವಸತಿ ರಹಿತರಿಗೆ ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಹಂತ ಹಂತವಾಗಿ ವಸತಿ ಸೌಕರ್ಯ ಕಲ್ಪಿಸಲು ಕ್ರಮ ಹಿಸಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ನಗರ ಪ್ರದೇಶದಲ್ಲಿ 2016-17 & 2017-18 ರಲ್ಲಿ ಸಮೀಕ್ಷೆ ಕೈಗೊಳ್ಳಲಾಗಿದ್ದು, ಸದರಿ ಸಮೀಕ್ಷೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 13841 ವಸತಿ ರಹಿತರು ಕಂಡು ಬಂದಿರುತ್ತಾರೆ. 2015-16 ರಿಂದ 2021-22 ರವರೆಗೆ 4270 ಮನೆಗಳನ್ನು ಮಂಜೂರು ಮಾಡಲಾಗಿದೆ. ಇನ್ನೂಳಿದ 9571 ವಸತಿ ರಹಿತರಿಗೆ ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಹಂತ ಹಂತವಾಗಿ ವಸತಿ ಸೌಕರ್ಯ ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ. |
| ಈ) | ಮಂಗಳೂರು ವಿಧಾನ ಸಭಾ ಕ್ಷೇತ್ರ ಉಳ್ಳಾಳದಲ್ಲಿ ಹಲವಾರು ಮನೆಗಳು ನಿರ್ಮಾಣಗೊಂಡು 15 ವರ್ಷಗಳಾದರೂ ಇದುವರೆಗೂ ಅರ್ಹರಿಗೆ ಮನೆಗಳನ್ನು ವಿತರಿಸದೆ ಸರ್ಕಾರದ ಹಣವನ್ನು ಪೋಲು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ರೀತಿಯಾಗಿ ಸರ್ಕಾರದ ಹಣವನ್ನು ಪೋಲು ಮಾಡಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು) | ಒಂಬತ್ತು ಕೆರೆ ಆಶ್ರಯ ಕಾಲೋನಿಯಲ್ಲಿ 390 ಮನೆಗಳನ್ನು ನಿರ್ಮಿಸಲಾಗಿತ್ತು, ಸದರಿ ಮನೆಗಳ ಗುಣ ಮಟ್ಟದ ಬಗ್ಗೆ ಖಾಸಗಿಯವರು ಲೋಕಾಯುಕ್ತ ಕಛೇರಿಗೆ ನೀಡಿದ ದೂರಿನನ್ವಯ, ಲೋಕಾಯುಕ್ತ ಕಛೇರಿಯ ತಾಂತ್ರಿಕ ವಿಭಾಗದಿಂದ ತನಿಖೆ ಮಾಡಿಸಲಾಗಿದ್ದು, ಸದರಿ ವರದಿಯಲ್ಲಿ ಕರ್ತವ್ಯ ಪಾಲನೆಯಲ್ಲಿ ನಿರ್ಲಕ್ಷ ತೋರಿಸಿ ವಸತಿ ಯೋಜನೆಯಡಿಯಲ್ಲಿ ಕಳಪೆ ಕಾಮಗಾರಿ ಮಾಡಿ ಕಟ್ಟಿದ ಮನೆಗಳನ್ನು ಸರಿಯಾಗಿ ಸಂರಕ್ಷಣೆ ಮಾಡದೆ ಹಣ ದುರುಪಯೋಗ ಪಡಿಸಿಕೊಂಡು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.<br><br>ಅದರನ್ವಯ ಸದರಿ ಅವಧಿಯಲ್ಲಿ ಕಾರ್ಯ ನಿರ್ವಹಿಸಿದ ಈ ಕೆಳಕಂಡ 5 ಅಧಿಕಾರಿಗಳ ವಿರುದ್ಧ ಕೆ.ಸಿ.ಎಸ್(ಸಿಸಿಎ) ನಿಯಮಗಳು 1957 ರ ನಿಯಮ 14ಎ ರಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ :ನಅಇ 62 ಡಿಎಂಕೆ 2014, ದಿನಾಂಕ :25.03.2014 ರಂತೆ ಇಲಾಖಾ ವಿಚಾರಣೆಯನ್ನು ನಡೆಸಲು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿದೆ.<br><br>1. ಶ್ರೀ ನಿತ್ಯಾನಂದ,ಅಭಿಯಂತರರು, ಮಂಗಳೂರು ಮಹಾನಗರ ಪಾಲಿಕೆ.<br>2. ಶ್ರೀ ಎ.ವಿ ಗಣೇಶ್, ಹಿಂದಿನ ಮುಖ್ಯಾಧಿಕಾರಿ, ಪುರಸಭೆ ಮೂಡಗೆರೆ.<br>3. ಶ್ರೀ ಎಂ.ಪದ್ಮನಾಭ, ಹಿಂದಿನ ಮುಖ್ಯಾಧಿಕಾರಿ ಪುರಸಭೆ ಉಲ್ಲಾಳ.<br>4. ಶ್ರೀ ಎಂ ಶ್ರೀನಿವಾಸ್, ಆರೋಗ್ಯ ನಿರೀಕ್ಷಕರು, ಪ್ರಾಥಮಿಕ ಆರೋಗ್ಯ ಕೇಂದ್ರ,ಅಜೆಕರ, ಕಾರ್ಕಳ ತಾಲ್ಲೂಕು.<br>5. ಶ್ರೀ ಬಿ.ಸಿ ಸದಾನಂದ, ಮುಖ್ಯಾಧಿಕಾರಿಗಳು ಪುರಸಭೆ ಕುಂದಾಪುರ,<br><br>ಇವರುಗಳ ವಿರುದ್ಧ ಸರ್ಕಾರ ಶಿಸ್ತು ಕ್ರಮ ಕೈಗೊಂಡಿದ್ದು, ಅವರುಗಳ ವೇತನ,ಬಡ್ತಿಯನ್ನು ತಡೆ ಹಿಡಿಯಲಾಗಿರುತ್ತದೆ. |

ಸಂಖ್ಯೆ :ವಇ 119 ಹೆಚ್‌ಎಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು